# ಫೇಂಡಾಮೃಗ

ಆಗ ನಾನು ಫೇಂಡಾಮೃಗವನ್ನು ನೋಡಿರಲಿಲ್ಲ. ಇಂದಿಗೂ ಅದನ್ನು ಕಣ್ಣ ಮುಂದೆ ನೋಡುವ ಅವಕಾಶ ಯಾಕೋ ನನಗೆ ದೊರಕಲಿಲ್ಲ. ಅತ್ತಿಗೆಯೇ ಹೇಳಿದ್ದು ಅದು ಫೇಂಡಾಮೃಗವೆಂದು. ಕಾಲುಗಳು ಆನೆಯಂತೆ ಇದ್ದದ್ದರಿಂದ ಅದು ದೊಡ್ಡ ಮೃಗವಾಗಿಯೇ ಇರಬಹುದೆಂದು ನಾನು ಊಹಿಸಿಕೊಂಡೆ. ಎಮ್ಮೆಯಂತೆ ಹೊಳೆಯುವ ಕಪ್ಪು ಬಣ್ಣದಲ್ಲಿತ್ತು. ಇತ್ತೀಚೆಗೆ ಟೀವಿ ಚಾನಲ್ ಒಂದರಲ್ಲಿ ನೋಡಿದಾಗ ನನ್ನ ಕಲ್ಪನೆ ಸುಳ್ಳಾಗಲಿಲ್ಲ ಎನ್ನುವುದನ್ನು ಅರ್ಥಮಾಡಿಕೊಂಡೆ. ಕಬ್ಬಿಣದ ಕವಚ ತೊಟ್ಟ ಫಿರಂಗಿಯಂತೆ ಅದು ಇತ್ತು.

ನಿಜವಾಗಲೂ ಅದರ ಗೌರವವನ್ನು ಹೆಚ್ಚಿಸಿದ್ದು ಅದರಲ್ಲಿ ತುಂಬಲ್ಪಟ್ಟ ನಾಣ್ಯಗಳಿಂದ ಇರಬಹುದು. ಹೊಸ ಒಂದು ರೂಪಾಯಿ ನಾಣ್ಯಗಳಿಂದ ತುಂಬಿದ ಅದ್ಭುತವಾದ ಫೇಂಡಾಮೃಗ. ಇಂತಹ ಒಂದು ಗೋಲಕವನ್ನೇ ಅತ್ತಿಗೆ ಊರಿಂದ ಬರುವಾಗ ತೆಗೆದುಕೊಂಡು ಬಂದಿದ್ದಳು.

ಫೇಂಡಾಮೃಗವನ್ನು ಸುರಕ್ಷಿತವಾಗಿ ಇಡಲು ನಮ್ಮ ಮನೆ ಸಾಕಾಗುತ್ತಿರಲಿಲ್ಲ. ಇದೇ ಅವಳನ್ನು ಚಿಂತೆಗೆ ಗುರಿಮಾಡಿತ್ತು. ಅಲ್ಮೆರಾ ಎಂಬುದೊಂದಿದ್ದರೂ ಅದರ ಕಪಾಟುಗಳಿಗೆ ಬೀಗ ಇರಲಿಲ್ಲ. ಹಳೆಯ ಸಾಮಾನುಗಳನ್ನು ಬಟ್ಟೆಗಳನ್ನು ಪೇರಿಸಿಡುವ ಅಟ್ಟದಂತೆಯೇ ಅದನ್ನು ಬಳಸುತ್ತಿದ್ದೆವು.

ಅಮ್ಮ ಹಣವನ್ನೂ ಒಡವೆಗಳನ್ನೂ ಹಳೆಯ ಬಿಂದಿಗೆಗಳಲ್ಲಿ ಅವಿತಿಟ್ಟಿದ್ದಾಳೆ. ಚಿಕ್ಕ, ದೊಡ್ಡ ನಲವತ್ತಕ್ಕೂ ಹೆಚ್ಚಾದ ಬಿಂದಿಗೆಗಳು ಒಂದು ಕತ್ತಲ ಕೋಣೆಯಲ್ಲಿ ರಹಸ್ಯವಾಗಿ ನಿಂತಿದ್ದವು. ಭತ್ತ, ಜೋಳ, ನವಣೆ, ರಾಗಿ, ಸಾಸಿವೆ, ಅಲಸಂದೆ ಕಾಳು, ಒಣಮೀನು, ಮೆಣಸಿನಕಾಯಿ, ಅರಿಸಿನ, ತಿಂಡಿಪದಾರ್ಥಗಳು ಎಲ್ಲವನ್ನೂ ಅದರಲ್ಲಿ ತುಂಬಿಡಲಾಗಿದೆ. ಅವುಗಳಲ್ಲಿ ಯಾವುದಾದರೂ ಒಂದರಲ್ಲಿ ಅಮ್ಮ ದುಡ್ಡನ್ನು ಮರೆಮಾಡಿಟ್ಟಿದ್ದಾಳೆ. ಅಮ್ಮನ ನಡವಳಿಕೆಯನ್ನು ಹತ್ತಿರದಿಂದ ಬಲ್ಲ ನನ್ನಂತಹವರಿಂದ ಮಾತ್ರವೇ ಆ ರಹಸ್ಯವನ್ನು ಕಂಡುಹಿಡಿಯಲು ಸಾಧ್ಯವಿತ್ತು. ಬೇಕಿದ್ದಾಗ ನಾನು ಅದರಿಂದ ಸ್ವಲ್ಪ ಕದ್ದಿದ್ದುಂಟು.

ಅತ್ತಿಗೆಗೆ ಅಮ್ಮನನ್ನು ಅನುಕರಿಸುವ ಧೈರ್ಯವಿಲ್ಲ. ಆದ್ದರಿಂದ ಅಣ್ಣನ ನೆರವಿನಿಂದ ಮರದ ಅಲ್ಮೆರಾದ ಒಂದು ಕಪಾಟನ್ನು ಸರಿಮಾಡಿಸಿ, ಒಂದು ಸಣ್ಣ ಬೀಗದ ನೆರವಿನೊಂದಿಗೆ ತನ್ನ